ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಖಾಸಗೀ ಕಿರಿಯ ಕಾಲೇಜುಗಳನ್ನು ತೆರೆಯಲು ಅನುಮತಿ ಕೋರಿ ಬಂದಿರುವ ಅರ್ಜಿಗಳೆಷ್ಟು ? ಹಾಗೂ ಸದರಿ ಅರ್ಜಿಗಳ ಬಗ್ಗೆ ಕೈಗೊಂಡ ತೀರ್ಮಾನವೇನು ?

ಆ) ಮುಳಬಾಗಿಲು ತಾಲ್ಲೂಕಿನ ಉತ್ತನೂರು ವಿದ್ಯಾಸಂಸ್ಥೆ ಕಿರಿಯ ಕಾಲೇಜು ತೆರೆಯಲು ಅನುಮತಿಗಾಗಿ ಅರ್ಜಿ ಯಾವಾಗ ಸಲ್ಲಿಸಲಾಗಿದೆ ?

ಇ) ಸಲ್ಲಿಸಿದ್ದಲ್ಲಿ, ಅನುಮತಿಯನ್ನು ನೀಡಲು ವಿಳಂಬವಾಗಲು ಕಾರಣಗಳೇನು ?

ಈ) ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :-

ಅ) ಒಂದು ಅರ್ಜಿ ಬಂದಿರುತ್ತದೆ. ಆಯುಕ್ತರಿಂದ ವರದಿ ಬಂದಿಲ್ಲ.

ಆ) ದಿನಾಂಕ 23-5-89 ರಲ್ಲಿ ಬಂದಿದೆ.

ಇ) ಆಯುಕ್ತರಿಂದ ವರದಿ ಬರದಿದ್ದ ಕಾರಣ.

ಈ) ವರದಿ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ :- ಗುತ್ತಿಗೆ ಶಿಕ್ಷಕರ ಖಾಯಂಮಾತಿ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 574 (1292)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಏಳು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಶಿಕ್ಷಕರನ್ನು ದಿನಾಂಕ 13-7-90 ರಂದು ಖಾಯಂ ಗೊಳಿಸಿರುವುದು ನಿಜವಲ್ಲವೆ ?

ಆ) ಈಗ ಖಾಯಂ ಆಗುತ್ತಿರುವ ಉಪನ್ಯಾಸಕರ ಶಿಕ್ಷಕರ ಹುದ್ದೆಗಳೆಷ್ಟು ? ವಿಷಯಾನುಕ್ರಮದಲ್ಲಿ ತಿಳಿಸುವುದು.

ಇ) 1990 ಮಾರ್ಚ್ 19 ರಂದು ಸದನದಲ್ಲಿ ಮಾನ್ಯ ಸಚಿವರು 60 ದಿನಗಳೊಳಗೆ ಖಾಯಂ ಗೊಳಿಸುವ ಆಶ್ವಾಸನೆ ನೀಡಿದ್ದರು ಈ ಆಶ್ವಾಸನೆಯನ್ನು ಇದುವರೆವಿಗೂ ಈಡೇರಿಸದಿರಲು ಕಾರಣಗಳೇನು?

ಈ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಸರ್ಕಾರಿ ಆಜ್ಞೆ ಹೊರಡಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :-

ಅ) ಖಾಯಂ ಗೊಳಿಸಿದ ಆದೇಶವನ್ನು ದಿನಾಂಕ 13-7-89 ರಂದು ಹೊರಡಿಸಲಾಗಿದೆ.

ಆ) ಮೇಲಿನ ಆದೇಶದಲ್ಲಿ ಈ ಕೆಳಕಂಡ ಕಾಂಟ್ರಾಕ್ಟ್ ಹುದ್ದೆಗಳನ್ನು ಖಾಯಂ ಗೊಳಿಸಲು ಆದೇಶಿಸಲಾಗಿದೆ.

1) ಪ್ರಾಥಮಿಕ ಶಾಲಾ ಶಿಕ್ಷಕರು — 3726.

2) ಪ್ರೌಢ ಶಾಲಾ ಶಿಕ್ಷಕರು — 3665.

3) ಕಿರಿಯ ಕಾಲೇಜು ಉಪನ್ಯಾಸಕರು — 839.

4) ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರು — 517.

5) ತಾಂತ್ರಿಕ ಶಿಕ್ಷಣ ಉಪನ್ಯಾಸಕರು — 184.

ಇ),ಈ) ಗುತ್ತಿಗೆ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸುವುದಕ್ಕೆ ವಿಶೇಷ ನಿಯಮಗಳನ್ನು ತಯಾರು ಮಾಡಲಾಗುತ್ತಿದೆ. ಅವರ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳನ್ನು ರೂಪಿಸಿದ ನಂತರ ಸಾಧ್ಯವಾದಷ್ಟು ಬೇಗ ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.